ಗುಳೇದಗುಡ್ಡ ಕ್ಷೇತ್ರದ ಮಂಗಲಭವನ ದೇವಸ್ಥಾನ ಅಭಿವೃದ್ಧಿಗೆ ಅನುದಾನ.

1563(2196) ಶ್ರೀ ರಾಜಶೇಖರ ಶೀಲವಂತ ವೀರಣ್ಣ (ಗುಳೇದಗುಡ್ಡ) :— ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಗುಳೇದಗುಡ್ಡ ಮತಕ್ಷೇತ್ರದಲ್ಲಿರುವ ಮಂಗಲ ಭವನ ದೇವಸ್ಥಾನ ಅಭಿವೃದ್ಧಿಗಾಗಿ ಅನುದಾನ ಕೋರಿ ಮನವಿಗಳು ಏನಾದರೂ ಬಂದಿದೆಯೇ?

2) ಹಾಗಿದ್ದಲ್ಲಿ 1998-99ನೇ ಸಾಲಿನಲ್ಲಿ ಅನುದಾನ ಒದಗಿಸಿದ ಟ್ರಸ್ಟ್‌ಗಳು ಯಾವುವು? ಮತ್ತು ನೀಡಲಾದ ಅನುದಾನ ಎಷ್ಟು?

3) 1999-2000ನೇ ಸಾಲಿನಲ್ಲಿ ಅನುದಾನ ನೀಡಲು ಉದ್ದೇಶಿಸಿರುವ ಟ್ರಸ್ಟ್‌ಗಳು ಯಾವುವು?

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :—

1) ಹೌದು ಬಂದಿವೆ. ವಿವರ ಈ ಕೆಳಕಂಡಂತೆ ಇದೆ.

ಅ) ಶ್ರೀ ಪದ್ಮಶಾಲೆ ಜಾತಿ ಸಂಸ್ಥೆ, ಗುಳೇದಗುಡ್ಡ, (ಬಾದಾಮಿ ತಾ: ಬಾಗಲಕೋಟೆ ಜಿಲ್ಲೆ) (ದೇವಸ್ಥಾನದ ಕಟ್ಟಡಕ್ಕಾಗಿ)

ಆ) ಶ್ರೀ ಬಸವೇಶ್ವರ ದೇವಾಲಯ ಸಮಿತಿ, ಗುಳೇದಗುಡ್ಡ (ದೇವಸ್ಥಾನದ ಕಟ್ಟಡಕ್ಕಾಗಿ)

ಇ) ಶ್ರೀ ದೇವಾಂಗ ಸಮಾಜ ದತ್ತಿ, ಗುಳೇದಗುಡ್ಡ (ಕಲ್ಯಾಣ ಮಂಟಪದ ಪರಿಷ್ಕೃತ ಅಂದಾಜುಪಟ್ಟಿ)

2. 1998-99ನೇ ಸಾಲಿನಲ್ಲಿ ಸರ್ಕಾರಿ ಆದೇಶ ಸಂಖ್ಯೆ : ಕಂಇ 111 ಮುಆಬ 98 ಭಾಗ (1) ದಿನಾಂಕ : 31-3-99ರ ಪ್ರಕಾರ ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಈ ಕೆಳಕಂಡ ಟ್ರಸ್ಟ್‌ಗಳಿಗೆ ಮಾತ್ರ ಅನುದಾನ ಮಂಜೂರಾಗಿದೆ.

1)	ಶ್ರೀ ದುರ್ಗಾದೇವಿ ದೇವರು, ಮಾಳಗಿ, ಬಾದಾಮಿ ತಾ:	ರೂ.	20,000-00
2)	ಶ್ರೀ ಯಂಡಿಗೇಶ್ವರ ದೇವಸ್ಥಾನ, ಯಂಡಿಗೇರಿ "	ರೂ.	20,000-00
3)	ಶ್ರೀ ಮಾರುತಿ ದೇವಸ್ಥಾನ, ಜಂಗಮವಾಡಿ "	ರೂ.	20,000-00
4)	ಶ್ರೀ ಸಿದ್ದೇಶ್ವರ ದೇವಸ್ಥಾನ, ಹೊಸೂರು, "	ರೂ.	20,000-00
5)	ಶ್ರೀ ಕೃಷ್ಣದೇವಸ್ಥಾನ, ಬಾದಾಮಿ	ರೂ.	20,000-00
6)	ಶ್ರೀ ಗದ್ದಮ್ಮದೇವರ ದೇವಸ್ಥಾನ, ಹುಲಿಕೆರೆ, "	ರೂ.	20,000-00

3)1999-2000 ನೇ ವರ್ಷಗಳಲ್ಲಿ ಯಾವ ಯಾವ ಟ್ರಸ್ಟ್‌ಗಳಿಗೆ ಅನುದಾನ ನೀಡಬೇಕೆಂದು ಈಗಾಗಲೇ ನಿರ್ಧರಿಸಿಲ್ಲ. ಈ ಆರ್ಥಿಕ ವರ್ಷದಲ್ಲಿ ಸರ್ಕಾರಕ್ಕೆ ಬರುವ ಪ್ರಸ್ತಾವ ಮನವಿಗಳನ್ನು ಪರಿಶೀಲಿಸಿ ಅಗತ್ಯತೆ ಮತ್ತು ಆದ್ಯತೆಯನ್ನು ಗಮನದಲ್ಲಿಟ್ಟುಕೊಂಡು ಅನುದಾನವನ್ನು ಮಂಜೂರು ಮಾಡಲಾಗುವುದು.

ವಾಟರ್ ಶೆಡ್ಡ್ ಡೆವಲಪ್‌ಮೆಂಟ್ ಬೋರ್ಡ್.

1564(2137) ಶ್ರೀ ಯು.ಆರ್. ಸಭಾಪತಿ (ಉಡುಪಿ) :— ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಕೇಂದ್ರ ಸರ್ಕಾರದ ಅನುದಾನ ಉಪಯೋಗಿಸಲು ವಾಟರ್ ಶೆಡ್ ಡೆವಲಪ್‌ಮೆಂಟ್ ಬೋರ್ಡ್‌ನ್ನು ಕೃಷಿ ಇಲಾಖೆಯ ಅಡಿಯಲ್ಲಿ ರಚಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಆ) ಹಾಗಿದ್ದಲ್ಲಿ, ಸದರಿ ಮಂಡಳಿಯ ರಚನೆಯಾಗದೆ ಕೇಂದ್ರ ಸರ್ಕಾರದ ಅನುದಾನವು ವಾಪಸ್ ಆಗಿರುವುದು ನಿಜವೇ? ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :—

ಅ) ಕೇಂದ್ರ ಸರ್ಕಾರದ ಅನುದಾನಿತ ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳೂ ಸೇರಿದಂತೆ ಎಲ್ಲಾ ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳನ್ನೂ ಒಂದೇ ಕಡೆಯಲ್ಲಿ ಸೇರಿಸಿ ಅನುಷ್ಠಾನಗೊಳಿಸುವ ಸಲುವಾಗಿ ರಾಜ್ಯದಲ್ಲಿ ಪ್ರತ್ಯೇಕ ಜಲಾನಯನ ಅಭಿವೃದ್ಧಿ ನಿರ್ದೇಶನಾಲಯವನ್ನು ರಚಿಸುವ ಪ್ರಸ್ತಾವನೆಯೊಂದನ್ನು ಸರ್ಕಾರವು ಪರಿಶೀಲಿಸುತ್ತಿದೆ.

ಆ) ಇಲ್ಲ, ಉದ್ಭವಿಸುವುದಿಲ್ಲ.

ಆರ್.ಟಿ.ಓ. ಕಛೇರಿಗಳಲ್ಲಿ ನಡೆಯುತ್ತಿರುವ ಅವ್ಯವಹಾರ.

1565(1738) ಶ್ರೀ ಯು.ಆರ್. ಸಭಾಪತಿ (ಉಡುಪಿ) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಕಳೆದ ವರ್ಷಗಳಲ್ಲಿ ಆರ್.ಟಿ.ಓ ಕಛೇರಿಗಳಲ್ಲಿ ನಡೆದ ಅವ್ಯವಹಾರ ಪ್ರಕರಣಗಳ ಒಟ್ಟು ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ಒದಗಿಸುವುದು)

ಆ) ಇದರಿಂದ ರಾಜ್ಯ ಬೊಕ್ಕಸಕ್ಕೆ ಆದ ನಷ್ಟ ಎಷ್ಟು?

ಇ) ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳಾವುವು?